ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 90

ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ

ಉತ್ತರಿಸಬೇಕಾದ ದಿನಾಂಕ : 01.02.2021

ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಸೇರಿದಂತೆ ಕೇಂದ್ರ ಸರ್ಕಾರದ ಯಾವ್ಯಾವ ಯೋಜನೆಯಡಿ ರಾಜ್ಯಕ್ಕೆ ಎಷ್ಟು ಅನುದಾನ ಬಿಡುಗಡೆಯಾಗಿದೆ. (ಯೋಜನೆಗಳ ಸಹಿತ ಜಿಲ್ಲಾವಾರು ವಿವರಗಳನ್ನು ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್‌ಗೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘಕ್ಕೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ-01ರಲ್ಲಿ ನೀಡಲಾಗಿದೆ.
ಆ)	ತುಮಕೂರು ಜಿಲ್ಲೆಗೆ ಈ ಯೋಜನೆಗಳಡಿಯಲ್ಲಿ ನೀಡಿರುವ ಅನದಾನ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ಯೋಜನೆಗಳ ಸಹಿತ ನೀಡುವುದು)	ತುಮಕೂರು ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ- 02ರಲ್ಲಿ ಹಾಗೂ ತಾಲ್ಲೂಕುವಾರು ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ-03ರಲ್ಲಿ ನೀಡಲಾಗಿದೆ.
ಇ)	National Health Mission (NRHM) ಯೋಜನೆಯಡಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಇತರೆ ಆಸ್ಪತ್ರೆಗಳ ದುರಸ್ಥಿಗೆ ಹಣ ಮೀಸಲಿಡಲಾಗಿದೆಯೇ;	ಇಲ್ಲ
ಈ)	NRHM ಯೋಜನೆಯಡಿ ಅನುಷ್ಠಾನಗೊಳಿಸಿದ ಯೋಜನೆಗಳಿಗೆ ಖರ್ಚು ಮಾಡಿದ ಮೊತ್ತವೆಷ್ಟು; (ತಾಲ್ಲೂಕುವಾರು ವಿವರಗಳನ್ನುನೀಡುವುದು)	ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿದ ವಿವರಗಳನ್ನು ಅನುಬಂಧ- 02ರಲ್ಲಿ ಹಾಗೂ ತಾಲ್ಲೂಕುವಾರು ವೆಚ್ಚದ ವಿವರಗಳನ್ನು ಅನುಬಂಧ-03 ರಲ್ಲಿ ನೀಡಲಾಗಿದೆ.
ಉ)	ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಪಟ್ಟನಾಯಕನ ಹಳ್ಳಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ NRHM ಯೋಜನೆಯಲ್ಲಿ ಉನ್ನತೀಕರಿಸಲು ಕ್ರಮಕೈಗೊಳ್ಳಲಾಗುವುದೇ; ಇಲ್ಲದಿದ್ದಲ್ಲಿ, ಯಾವ ಯೋಜನೆಯಡಿ ಈ ಆರೋಗ್ಯ ಕೇಂದ್ರವನ್ನು ಉನ್ನತೀಕರಿಸಲಾಗುವುದು?	ಇಲ್ಲ. ಆರ್ಥಿಕ ವಿಸ್ತರತೆ ಇಲ್ಲದೇ ಇರುವುದರಿಂದ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳು ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ: ಆಕುಕ 90 ಎಸ್.ಟಿ.ಕ್ಯೂ 2021

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.

ಅನುಬಂಧ-01

(ರೂ. ಕೋಟಿಗಳಲ್ಲಿ)

ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನಕ್ಕೆ ಬಿಡುಗಡೆಯಾದ ಅನುದಾನದ ವಿವರ

ಕ್ರಸಂ	ಆರ್ಥಿಕ ವರ್ಷ	ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ	
			ಸೊಸೈಟಿ ಮೂಲಕ	ಖಜಾನೆ ಮೂಲಕ
1	2017-18	734.28	700.89	398.69
2	2018-19	738.18	680.90	520.62
3	2019-20	719.51	798.23	280.37

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘಕ್ಕೆ ಬಿಡುಗಡೆಯಾದ ಅನುದಾನದ ವಿವರ

(ರೂ. ಕೋಟಿಗಳಲ್ಲಿ)

ಕ್ರಸಂ	ಜಿಲ್ಲೆಗಳು	2017-18	2018-19	2019-20
1	ಬಾಗಲಕೋಟೆ	22.96	30.05	47.12
2	ಬೆಂಗಳೂರು ಗ್ರಾಮಾಂತರ	10.95	15.08	17.99
3	ಬೆಂಗಳೂರು ನಗರ	38.71	30.81	47.30
4	ಬೆಳಗಾವಿ	49.81	53.62	69.57
5	ಬಳ್ಳಾರಿ	36.97	39.58	76.82
6	ಬೀದರ್	25.04	34.37	50.16
7	ವಿಜಯಪುರ	26.26	32.76	50.79
8	ಚಾಮರಾಜನಗರ	14.97	20.83	22.67
9	ಚಿಕ್ಕಬಳ್ಳಾಪುರ	18.42	22.74	29.55
10	ಚಿಕ್ಕಮಗಳೂರು	22.24	34.54	39.77
11	ಚಿತ್ರದುರ್ಗ	22.49	30.26	33.85
12	ದಕ್ಷಿಣ ಕನ್ನಡ	19.46	31.32	35.36
13	ದಾವಣಗೆರೆ	25.92	31.37	32.94
14	ಧಾರವಾಡ	22.07	27.11	33.41
15	ಗದಗ	18.30	22.84	24.12
16	ಕಲಬುರಗಿ	43.87	43.16	66.32
17	ಹಾಸನ	27.41	31.97	37.47

ಅನುಬಂಧ–02

(ರೂ. ಕೋಟಿಗಳಲ್ಲಿ)

ತುಮಕೂರು ಜಿಲ್ಲಾ ಆಕುಕ ಸಂಘಕ್ಕೆ ಕಳೆದ ಮೂರು ವರ್ಷಗಳಿಂದ ರಾಜ್ಯ ಆಕುಕ ಸಂಘದಿಂದ ಬಿಡುಗಡೆ ಮಾಡಿದ ಅನುದಾನ ಹಾಗೂ ಖರ್ಚಿನ ವಿವರ

ಕ್ರಸಂ	ಆರ್ಥಿಕ ವರ್ಷ	ಬಿಡುಗಡೆಯಾದ ಅನುದಾನ	ಖರ್ಚು
1	2017-18	35.48	37.98
2	2018-19	41.43	43.01
3	2019-20	50.62	50.82

ಷರಾ : ಹೆಚ್ಚುವರಿ ವೆಚ್ಚವನ್ನು ಆರಂಭಿಕ ಶಿಲ್ಕಿನಲ್ಲಿ ಭರಿಸಲಾಗಿದೆ.

ಅನುಬಂಧ-03

2017-18, 2018-19 ಮತ್ತು 2019-20 ನೇ ಆರ್ಥಿಕ ಸಾಲಿನಲ್ಲಿ ತುಮಕೂರು. ಜಿಲ್ಲಾ ಆಕುಕ ಸಂಘದಡಿ ತಾಲ್ಲೂಕುವಾರು ಖರ್ಚು ವೆಚ್ಚದ ವಿವರ

ರೂ.ಕೋಟಿಗಳಲ್ಲಿ

2017-18ನೇ ಸಾಲಿನ ಖರ್ಚು ವೆಚ್ಚದ ವಿವರ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಬಿಡುಗಡೆಯಾದ ಅನುದಾನ	ವೆಚ್ಚ
1	ಚಿಕ್ಕನಾಯಕನಹಳ್ಳಿ	1.09	0.86
2	ಗುಬ್ಬಿ	1.36	0.93
3	ಕೊರಟಗೆರೆ	1.98	1.34
4	ಕುಣಿಗಲ್	1.61	1.24
5	ಮಧುಗಿರಿ	1.62	1.11
6	ಪಾವಗಡ	1.66	1.17
7	ಶಿರಾ	1.42	0.98
8	ತಿಪಟೂರು	1.78	1.26
9	ತುಮಕೂರು	1.35	1.04
10	ತುರುವೇಕೆರೆ	1.10	0.87
	ಒಟ್ಟು	**14.97**	**10.81**

2018-19ನೇ ಸಾಲಿನ ಖರ್ಚು ವೆಚ್ಚದ ವಿವರ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಬಿಡುಗಡೆಯಾದ ಅನುದಾನ	ವೆಚ್ಚ
1	ಚಿಕ್ಕನಾಯಕನಹಳ್ಳಿ	1.09	1.37
2	ಗುಬ್ಬಿ	1.06	1.09
3	ಕೊರಟಗೆರೆ	0.76	0.77
4	ಕುಣಿಗಲ್	1.44	1.30
5	ಮಧುಗಿರಿ	1.05	0.92
6	ಪಾವಗಡ	1.35	1.36
7	ಶಿರಾ	1.51	1.40
8	ತಿಪಟೂರು	1.16	1.16
9	ತುಮಕೂರು	3.90	3.63
10	ತುರುವೇಕೆರೆ	0.82	0.88
	ಒಟ್ಟು	14.14	13.88

2019-20ನೇ ಸಾಲಿನ ಖರ್ಚು ವೆಚ್ಚದ ವಿವರ			
ಕ್ರಮ. ಸಂಖ್ಯೆ	ತಾಲ್ಲೂಕಿನ ಹೆಸರು	ಬಿಡುಗಡೆಯಾದ ಅನುದಾನ	ವೆಚ್ಚ
1	ಚಿಕ್ಕನಾಯಕನಹಳ್ಳಿ	1.17	0.98
2	ಗುಬ್ಬಿ	1.42	1.44
3	ಕೊರಟಗೆರೆ	0.95	0.80
4	ಕುಣಿಗಲ್	1.46	1.51
5	ಮಧುಗಿರಿ	1.11	1.18
6	ಪಾವಗಡ	2.00	1.81
7	ಶಿರಾ	1.83	2.01
8	ತಿಪಟೂರು	1.42	1.26
9	ತುಮಕೂರು	4.00	4.05
10	ತುರುವೇಕೆರೆ	1.04	1.06
	ಒಟ್ಟು	**16.40**	**16.10**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 90ಕ್ಕೆ ಪೂರಕ ಟಿಪ್ಪಣಿ

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವು 2005 ರಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಡಿ ಪ್ರಾರಂಭವಾಗಿದ್ದು, 2013 ರಲ್ಲಿ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನವು ಒಳಗೊಂಡು ರಾಷ್ಟ್ರೀಯ ಆರೋಗ್ಯ ಅಭಿಯಾನವಾಗಿ ಕಾರ್ಯಗತಗೊಂಡಿದೆ.

ಸಮಗ್ರ ಮತ್ತು ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸಿ ಸೇವೆಗಳನ್ನು ಸಮಾನವಾಗಿ ಪಡೆಯಲು ಮತ್ತು ಪ್ರಾಂತೀಯ ಅಸಮಾನತೆ ಹೋಗಲಾಡಿಸುವುದು. ಜನಸಂಖ್ಯೆ ಏರದಂತೆ ಸ್ಥಿರೀಕರಿಸಿ, ಆಯುಷ್ ಪದ್ಧತಿಯನ್ನು ಆರೋಗ್ಯ ಸೇವೆಗಳ ಅವಿಭಾಜ್ಯ ಅಂಗವಾಗಿ ಮಾಡುವುದು. ಎಲ್ಲಾ ಆರೋಗ್ಯ ಚಟುವಟಿಕೆಗಳಲ್ಲಿ ಸಮುದಾಯದ ಸಕ್ರಿಯ ಭಾಗವಹಿಸುವಿಕೆಯಿಂದ ಸೇವೆಗಳನ್ನು ಉತ್ತಮವಾಗಿ ಪಡೆಯುವಂತೆ ಮಾಡುವುದು ಅಭಿಯಾನದ ಉದ್ದೇಶವಾಗಿದೆ.

2017-18, 2018-19 ಮತ್ತು 2019-20ನೇ ಸಾಲುಗಳಲ್ಲಿ ಕೇಂದ್ರ ಸರ್ಕಾರದಿಂದ ಸೊಸೈಟಿ ಮೂಲಕ ರೂ. 2180.02 ಕೋಟಿ ಖಜಾನೆ ಮೂಲಕ ರೂ.1199.68 ಕೋಟಿ ಮತ್ತು ರಾಜ್ಯ ಸರ್ಕಾರದಿಂದ ರೂ 2191.97 ಕೋಟಿಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನಕ್ಕೆ ಬಿಡುಗಡೆ ಮಾಡಲಾಗಿರುತ್ತದೆ. ಇದರಲ್ಲಿ ಎಲ್ಲಾ ಜಿಲ್ಲೆಗಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘಗಳಿಗೆ ರೂ. 2788.22 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ತುಮಕೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘಕ್ಕೆ ರೂ. 127.53 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ. 131.80 ಕೋಟಿಗಳು ವೆಚ್ಚವಾಗಿರುತ್ತದೆ ಹಾಗೂ ಹೆಚ್ಚುವರಿ ವೆಚ್ಚವನ್ನು ಆರಂಭಿಕ ಶಿಲ್ಕಿನಲ್ಲಿ ಭರಿಸಲಾಗಿರುತ್ತದೆ.

ಆರ್ಥಿಕ ವಿಸ್ತರತೆ ಇಲ್ಲದೇ ಇರುವುದರಿಂದ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳು ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.